# ಬಿಳಿ ‘ಹೊಳೆ ದಾಸವಾಳ’



ಮಲೆನಾಡಿನಲ್ಲಿ ಸಾಮಾನ್ಯವಾಗಿ ಕೆಂಪುಬಣ್ಣದ ಹೊಳೆ ದಾಸವಾಳ ಗಿಡ ಮತ್ತು ಹೂ ಕಾಣಸಿಗುತ್ತವೆ. ಅಪರೂಪದ ಬಿಳಿ ‘ಹೊಳೆ ದಾಸವಾಳ’ ಗಿಡವು ಮಲೆನಾಡಿನಲ್ಲಿ ಪತ್ತೆಯಾಗಿದ್ದು, ಅದು ಅಪಾರ ಔಷಧೀಯ ಗುಣಗಳನ್ನು ಹೊಂದಿದೆ. ಅಪರೂಪದ ಗಿಡ ಮೂಲಿಕೆಯಾಗಿರುವ ಇದು ಕಾಯಿ ಕಚ್ಚಿಕೊಂಡು ಹಣ್ಣು ಬಿಡುವುದು ಕಡಿಮೆ. ಈ ಗಿಡದ ಹೂವು ಮೂರ್ನಾಲ್ಕು ದಿನಗಳ ವರೆಗೆ ಅರಳಿಕೊಂಡೇ ಇರುತ್ತವೆ. ನೋಡಲು ಆಕರ್ಷಕವಾಗಿರುತ್ತವೆ.

■ **ದತ್ತಾತ್ರೇಯ ಭಟ್ಟ, ಕಣ್ಣಿಪಾಲ, ವಜ್ರಳ್ಳಿ**



# ಕಾಳಿಕಾ ದೇವಿ ಮಹಿಮೆ

ಬೆಳಗಾವಿ ಜಿಲ್ಲೆಯ ಸವದತ್ತಿ ಬಳಿಯ ಶಿರಸಂಗಿಯಲ್ಲಿ ಕಾಳಿಕಾದೇವಿ ದೇವಸ್ಥಾನವಿದೆ. ಹರಕೆ ಹೊತ್ತರೆ ಕಾಳಿಕಾದೇವಿಯು ಭಕ್ತರ ಬೇಡಿಕೆಯನ್ನು ಈಡೇರಿಸುತ್ತಾಳೆ ಎಂಬುದು ಇಲ್ಲಿನ ಐತಿಹ್ಯ. ಭಕ್ತರು ಬೇಡಿಕೊಂಡದ್ದು ಈಡೇರಿದರೆ ಈ ಚಿತ್ರದಲ್ಲಿರುವಂತೆ ತೆಂಗಿನಕಾಯಿಯನ್ನು ಭಕ್ತರು ಕಟ್ಟಿ ಹೋಗುತ್ತಾರೆ. ಕೆಲವು ದೇವಸ್ಥಾನದಲ್ಲಿ ಬೇಡಿಕೆ ಈಡೇರಿದರೆ ಅಭಿಷೇಕ ಮಾಡಿಸಿ ದೇವರ ಕೃಪೆಗೆ ಪಾತ್ರರಾಗುವವರು. ಆದರೆ, ಈ ದೇವಸ್ಥಾನದಲ್ಲಿ ಮಾತ್ರ ತೆಂಗಿನಕಾಯಿಯನ್ನೇ ಕಟ್ಟಬೇಕು. ಇದು ಇಲ್ಲಿನ ನಂಬಿಕೆ.

■ **ಜಗದೀಶ ಎಂ. ಸಂಗಣ್ಣವರ, ಹುಣಶೀಕಟ್ಟಿ**

# ‘ತಾಂಬೂಲ ಸೇವೆ’




ಮಲೆನಾಡಿನಲ್ಲಿ ಅತಿಥಿ ಆತಿಥ್ಯದಲ್ಲಿ ‘ತಾಂಬೂಲ ಸೇವೆ’ಯೂ ಒಂದು. ಮನೆಗೆ ಬಂದವರಿಗೆ ಚಹಾ–ತಿಂಡಿ, ಊಟ ನೀಡುವಂತೆ ಎಲೆ–ಅಡಿಕೆಯಿಂದ ಕೂಡಿದ ಶುದ್ಧ ತಾಂಬೂಲವನ್ನು ಕೊಡುವುದು ಅನಾಧಿಕಾಲದಿಂದಲೂ ರೂಢಿಯಲ್ಲಿದೆ.

ಉತ್ತರ ಕನ್ನಡದ ಸಿರಸಿಯ ಕೃಷಿಕ, ಅಡಿಕೆ ಬೆಳೆಗಾರ ಬೊಮ್ನಳ್ಳಿಯ ವಿಘ್ನೇಶ್ವರ ಹೆಗಡೆ ಅವರ ಮನೆಗೆ ಹೋದವರನ್ನು ಹಜಾರದಲ್ಲಿ (ಜಗುಲಿ) ಮೊದಲಿಗೆ ಸ್ವಾಗತಿಸುವುದೇ ಚಿತ್ರದಲ್ಲಿ ಕಾಣುವ ಈ ವಿಶಿಷ್ಟ ತಾಂಬೂಲ ಬಟ್ಟಲು. ಮಕ್ಕಳ ಆಟಿಕೆಯಂತೆ ಕಾಣುವ, ಮರದ ಪುಟ್ಟ ವಾಹನದಂತಿರುವ ತಾಂಬೂಲ ಬಟ್ಟಲು ನೋಡಲು ವಿಶೇಷವಾಗಿದೆ. ಇದರಲ್ಲಿ ಎಲೆ, ಅಡಿಕೆ, ಸುಣ್ಣ, ಏಲಕ್ಕಿ... ಹೀಗೆ ತಾಂಬೂಲ ಪ್ರಿಯರಿಗೆ ಬೇಕಾದ ಪರಿಕರಗಳೆಲ್ಲ ಇದರಲ್ಲಿ ಲಭ್ಯ! ಹಾಗೆಯೇ ಎಲೆಯ ಚೂರು (ಕಸ) ಹಾಕಲೂ ಗಾಡಿಯಲ್ಲಿ ಪ್ರತ್ಯೇಕ ಸ್ಥಳವಿದೆ. ಇಂತಹ ನಾನಾ ಆಕಾರದ ತಾಂಬೂಲ ಬಟ್ಟಲುಗಳನ್ನು ಇಲ್ಲಿ ಕಾಣಬಹುದು..

■ **ಜಿ. ಅರ್ಚನಾ ಹೆಗಡೆ, ಶಿರಸಿ**